


# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)



ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೩೨

ಸ್ವಾಮಿ ಶಿವಾನಂದರು ಊಟಿಯಲ್ಲಿ ಇದ್ದ ದಿನಗಳ ಸುವರ್ಣ ಸ್ಮೃತಿಯು ಅಲ್ಲಿಯ ಸಂನ್ಯಾಸಿಗಳ ಮತ್ತು ಭಕ್ತರ ಹೃದಯದಿಂದ ಮಾಸುವಂಥದ್ದಲ್ಲ. ಇಂದು ೧೨ ವರ್ಷಗಳ ನಂತರ ಮತ್ತೆ ಸಂಘಾಧ್ಯಕ್ಷರ ಪದಾರ್ಪಣೆಯಲ್ಲಿ ಮತ್ತದೇ ಹಿಂದಿನ ದಿನಗಳನ್ನು ಮರಳಿ ಸವಿಯುವ ನಿರೀಕ್ಷೆಯಿಂದ ಎಲ್ಲರೂ ಉಲ್ಲಾಸಭರಿತರು. ಏಕೆಂದರೆ ಸಾಮಾನ್ಯವಾಗಿ ಜನರು ವ್ಯಕ್ತಿಯ ಪೂಜೆಯನ್ನಲ್ಲ, ಆದರ್ಶದ ಪೂಜೆಯನ್ನು ಮಾಡುತ್ತಾರೆ.

ಮಹಾಪುರುಷ ಮಹಾರಾಜರು ಈ ಆಶ್ರಮದ ಉದ್ಘಾಟನೆಯಾದಂದಿನಿಂದ ಸ್ವಾಮಿ ಚಿದ್ಭವಾನಂದರಿಗೆ ಅದನ್ನು ನಡೆಸುವ ಜವಾಬ್ದಾರಿಯನ್ನು ವಹಿಸಿದ್ದರು. ಈಗಲೂ ಸಹ ಆ ಜವಾಬ್ದಾರಿಯನ್ನು ಅವರು ಅತ್ಯಂತ ನಿಷ್ಠೆಯಿಂದ ನಿರ್ವಹಿಸುತ್ತಿದ್ದರು. ಸಂಘಾಧ್ಯಕ್ಷರ ಆಗಮನದಿಂದಾಗಿ ಊಟಿಯ ಆಶ್ರಮವು ಉತ್ಸವದ ಸಂಭ್ರಮದಿಂದ ಕಳೆಕಟ್ಟಿತು. ದಕ್ಷಿಣ ಭಾರತದ ಅನೇಕ ಆಶ್ರಮಗಳಿಂದ ಸಾಧು-ಬ್ರಹ್ಮಚಾರಿಗಳು ಬಂದಿದ್ದರು. ದಿನವೂ ಬೆಳಗ್ಗೆ ವೇದಾಂತದ ಪಾಠವಾಗುತ್ತಿತ್ತು. ವಿರಜಾನಂದರೂ ಸಹ ಕೆಲವು ದಿನ ಆ ತರಗತಿಗಳಲ್ಲಿ ಉಪಸ್ಥಿತರಿದ್ದರು. ಸಂಜೆ ಆರತಿಯಾದ ನಂತರ ಆಶ್ರಮದ ವರಾಂಡಾದಲ್ಲಿ ಸಾಧು-ಭಕ್ತರು ನೆರೆಯುತ್ತಿದ್ದರು. ಅಲ್ಲಿ ಕುಳಿತು ವಿರಜಾನಂದರು ಅನೇಕ ವಿಷಯಗಳನ್ನು ಮಾತನಾಡುತ್ತಿದ್ದರು. ಒಂದು ದಿನ ಅವಿನಾಶಿಯವರ ಬೇಡಿಕೆಯ ಮೇರೆಗೆ ಸ್ವಾಮಿ ವಿವೇಕಾನಂದರ ಆದರ್ಶವನ್ನು ಕುರಿತು ಮನೋಜ್ಞವಾಗಿ ಮಾತನಾಡಿದರು. ಉದಕಮಂಡಲದಲ್ಲಿ ಹಠಾತ್ತನೆ ಇವರಿಗೆ ಶೀತ ತಗುಲಿ ಆರೋಗ್ಯವು ಸ್ವಲ್ಪ ಹದಗೆಟ್ಟರೂ ಕೂಡ ಆಗಾಗ ಹೊರಗೆ ಹೋಗಿ, ತಿರುಗಾಡಿ ಬರುತ್ತಿದ್ದರು. ಹದಿನೈದು ದಿನಗಳು ಅಲ್ಲಿ ತಂಗಿದ್ದು ಕೆಲವರಿಗೆ ಮಂತ್ರದೀಕ್ಷೆಯನ್ನೂ ಕೊಟ್ಟಿದ್ದರು.

ವಿರಜಾನಂದರು ಊಟಿಯಿಂದ ಚೆನ್ನೈಗೆ ಹಿಂತಿರುಗಿದರು. ಅಲ್ಲಿಯ ಮಠದಲ್ಲಿ 'ಶ್ರೀರಾಮಕೃಷ್ಣ ಶತಮಾನೋತ್ಸವ ಸ್ಮಾರಕ ಗ್ರಂಥಾಲಯ'ವು ಸಿದ್ಧವಾಗಿತ್ತು. ವಿರಜಾನಂದರು ಆನಂದದಿಂದ ಅದನ್ನು ಉದ್ಘಾಟಿಸಿದರು. ನಗರದ ಅನೇಕ ಗಣ್ಯವ್ಯಕ್ತಿಗಳು ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಚೆನ್ನೈನಲ್ಲಿ ಕೆಲವು ದಿನಗಳನ್ನು ಕಳೆದು, ಮೇ ೧೫ರಂದು (೧೯೩೮) 'ಗ್ರ್ಯಾಂಡ್ ಟ್ರಂಕ್' ಎಕ್ಸ್‌ಪ್ರೆಸ್‌ನಲ್ಲಿ ಉತ್ತರ ಭಾರತಕ್ಕೆ ಪ್ರಯಾಣಿಸಿದರು. ಜೊತೆಯಲ್ಲಿ ಸ್ವಾಮಿ ಅನಂತಾನಂದರೂ, ದಕ್ಷಿಣ ಭಾರತದ ಬ್ರಹ್ಮಚಾರಿ ಸೇವಕರೊಬ್ಬರೂ ಇದ್ದರು. ಸಂಘಾಧ್ಯಕ್ಷರಿಗೆ ವಿದಾಯ ಅಭಿನಂದನೆಗಳನ್ನು ನೀಡಲು ರೈಲು ನಿಲ್ದಾಣದಲ್ಲಿ ಸಾಧು-ಭಕ್ತರು ಬಹಳ ಸಂಖ್ಯೆಯಲ್ಲಿ ನೆರೆದಿದ್ದರು.

ರೈಲು ನಾಗಪುರವನ್ನು ಹಾದು ಹೋಗುವುದಿತ್ತು. ಈ ಅವಕಾಶವನ್ನು ಉಪಯೋಗಿಸಿಕೊಂಡು ನಾಗಪುರದ ಶ್ರೀರಾಮಕೃಷ್ಣ ಆಶ್ರಮವು ವಿರಜಾನಂದರನ್ನು ಕಡೇಪಕ್ಷ ಒಂದು ದಿನದ ಮಟ್ಟಿಗಾದರೂ ಅಲ್ಲಿ ಇಳಿದುಕೊಳ್ಳಬೇಕೆಂದು ತುಂಬ ಕಳಕಳಿಯಿಂದ ಪ್ರಾರ್ಥಿಸಿತು. ವಿರಜಾನಂದರಿಗೆ ಇದನ್ನು ನಿರಾಕರಿಸಲಾಗಲಿಲ್ಲ. ಮೇ ೧೬ರಂದು ಬೆಳಿಗ್ಗೆ ೧೦ ಗಂಟೆಗೆ ನಾಗಪುರವನ್ನು ತಲುಪಿದರು. ವಿಪರೀತ ಸೆಖೆಯಾದರೂ ಸಹ ಅಲ್ಲಿಯ ಸಾಧು-ಭಕ್ತರ ಉತ್ಸಾಹಕ್ಕೆ ಪಾರವೇ ಇರಲಿಲ್ಲ. ಪೂಜ್ಯ ಅತಿಥಿಗಳ ಆರೋಗ್ಯ-ಅನುಕೂಲದ ಮೇಲೆ ಸಹ ಅವರು ಬಹಳ ನಿಗಾ ಇಟ್ಟಿದ್ದರು. ಇವರೆಲ್ಲರ ಪ್ರೀತ್ಯಾದರಗಳು ವಿರಜಾನಂದರ ಹೃದಯವನ್ನು ತಟ್ಟಿತು. ಅಪರಾಹ್ನದಲ್ಲಿ ಅನೇಕ ದರ್ಶನಾರ್ಥಿಗಳಿಗೆ ದರ್ಶನವಿತ್ತು ಮಾತುಕತೆಗಳನ್ನಾಡಿದರು. ರಾತ್ರಿ ಹದಿನಾಲ್ಕು ಮಂದಿ ದೀಕ್ಷಾರ್ಥಿಗಳಿಗೆ ನಾಲ್ಕು ಗಂಟೆಗಳ ಕಾಲ ಏಕಾಸನದಲ್ಲಿ ಕುಳಿತು ಮಂತ್ರದೀಕ್ಷೆಯನ್ನು ನೀಡಿದರು. ಮುಗಿಸಿ ಎದ್ದಾಗ ರಾತ್ರಿ ಹನ್ನೆರಡಾಗಿತ್ತು.

ನಾಗಪುರದ ಆಶ್ರಮವು ಜನವಿರಳ 'ಧನ್‌ತೌಲಿ' ಎಂಬಲ್ಲಿ ಬಹಳ ವಿಸ್ತಾರವಾದ ಭೂಮಿಯನ್ನೊಳಗೊಂಡಿತ್ತು. ಊಟಿಯ ಆಶ್ರಮದಂತೆಯೇ ಇಲ್ಲಿಯ ಆಶ್ರಮ ಸ್ಥಾಪನೆಯ ಹಿಂದೆ ಸ್ವಾಮಿ ಶಿವಾನಂದರ ಪ್ರೇರಣೆ ಇತ್ತು. ಅವರು ೧೯೨೫ರಲ್ಲಿ ಮುಂಬೈನಿಂದ ಬೇಲೂರಿಗೆ ಹಿಂತಿರುಗುತ್ತಿದ್ದಾಗ ನಾಗಪುರದ ಕೆಲವು ಭಕ್ತರ ಒತ್ತಾಯದ ಮೇರೆಗೆ ಇಲ್ಲಿ ಇಳಿದುಕೊಂಡಿದ್ದರು. ಆಗ ಆಶ್ರಮವೇನೂ ಇರಲಿಲ್ಲ; ಭಕ್ತರೆಲ್ಲರೂ ತಮಗೆ ಅನುಕೂಲವಾದಾಗಲೆಲ್ಲ ಒಂದೆಡೆ ಸೇರಿ ಸದ್ಗ್ರಂಥ ಪಠನ, ಪರಮಾರ್ಥ ಚಿಂತನೆ, ಭಜನೆ ಮುಂತಾದವುಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಮುಂದೆ ಅಲ್ಲಿ ಶ್ರೀರಾಮಕೃಷ್ಣಾಶ್ರಮವೊಂದು ಸ್ಥಾಪನೆಯಾಗಲೆಂಬ ಮಹದಾಸೆಯಿಂದ ಸ್ವಲ್ಪ ಸ್ಥಳವನ್ನೂ ಸಹ ಖರೀದಿಸಿಟ್ಟಿದ್ದರು. ೧೯೨೫ರ ಫೆಬ್ರವರಿ ೧೬ರಂದು ಶಿವಾನಂದರು ತಾವೇ ಸ್ವತಃ ಶ್ರೀರಾಮಕೃಷ್ಣರ ಪೂಜೆಯನ್ನು ನೆರವೇರಿಸಿ, ಅಸ್ತಿಭಾರವನ್ನು ಹಾಕಿದ್ದರು. ಮತ್ತೆ ಎರಡು ವರ್ಷಗಳ ನಂತರ ೧೯೨೭ರ ಫೆಬ್ರವರಿಯಲ್ಲಿ ಬಂದಾಗ

ಕಟ್ಟಡದ ನಿರ್ಮಾಣ ಆರಂಭವಾಗಿತ್ತು. ಸ್ವಾಮಿ ಶಿವಾನಂದರು ಆ ಸ್ಥಳದಲ್ಲೇ ತಂಬು (ಡೇರೆ) ಹೂಡಿ ಇರುವುದಾಗಿ ನಿರ್ಧರಿಸಿದರು. ಭಕ್ತರೂ ಅದರಂತೆಯೇ ವ್ಯವಸ್ಥೆ ಮಾಡಿದರು. ಶಿವಾನಂದರು ಅಲ್ಲಿದ್ದ ಏಳು ದಿನವೂ ಆಶ್ರಮದ ಪರಿಸರವು ಭಜನೆ, ಸತ್ಸಂಗ, ಭಕ್ತ ಸಮಾಗಮಗಳಿಂದ ಪ್ರತಿಧ್ವನಿಸಿತ್ತು. ಇದಾದ ಒಂದು ವರ್ಷದ ನಂತರ ಸ್ವಾಮಿ ಶಿವಾನಂದರ ಆದೇಶ ಮತ್ತು ಅಮೂಲ್ಯ ಆಶೀರ್ವಾದಗಳನ್ನು ಒತ್ತಾಸೆಯಾಗಿಟ್ಟುಕೊಂಡು ಮೂವತ್ತೆರಡು ವರ್ಷದ ಸಂನ್ಯಾಸಿ ಭಾಸ್ಕರೇಶ್ವರಾನಂದರು (ವಿಪ್ರದಾಸ್) ಇಲ್ಲಿಯ ಕೆಲಸವನ್ನು ನಿರ್ವಹಿಸಲೆಂದು ಬಂದರು. ಕ್ಷೀಣಕಾಯದವರಾದರೂ ಸಹ ಅಮಿತ ಉತ್ಸಾಹವುಳ್ಳ ಈ ಸೌಮ್ಯ ಮೂರುತಿಯು ನಾಗಪುರದ ಧೂಳು ತುಂಬಿದ ರಸ್ತೆಗಳಲ್ಲಿ ತಿರುಗಾಡಿ ಕರ್ಮಯೋಗದ ಸಾಧನೆಯನ್ನು ಆಚರಿಸಿದರು. ಉಪಾಸನಾ ಮಂದಿರ, ವಿದ್ಯಾರ್ಥಿ ನಿಲಯ, ಗ್ರಂಥಾಲಯ, ಉಚಿತ ಚಿಕಿತ್ಸಾಲಯ, ಪುಸ್ತಕ ಪ್ರಕಾಶನ, ಉಪನ್ಯಾಸಗಳು ಹೀಗೆ, ವಿವಿಧ ಕಾರ್ಯಚಟುವಟಿಕೆಗಳು ರೂಪುಗೊಳ್ಳುತ್ತ ಹೋದವು. ನಾಗಪುರದ ಮರಾಠಿ ಮತ್ತು ಹಿಂದಿ ಮಾತನಾಡುವ ಜನಸಾಮಾನ್ಯರು ಶ್ರೀರಾಮಕೃಷ್ಣ-ವಿವೇಕಾನಂದರ ವಿಚಾರಧಾರೆಯಿಂದ ಮೆಲ್ಲಮೆಲ್ಲನೆ ಆಕರ್ಷಿತರಾಗತೊಡಗಿದರು. ಇಂದು ನಾಗಪುರದ ಶ್ರೀರಾಮಕೃಷ್ಣ ಆಶ್ರಮವು ಜನಪ್ರಿಯ ಬೃಹತ್ ಸಂಸ್ಥೆಯಾಗಿದೆ. ಇದು ಸರ್ವಮತಗಳ, ಸರ್ವಜಾತಿಯ ಜನರ ಶ್ರದ್ಧೆ-ವಿಶ್ವಾಸಗಳನ್ನು ಜಾಗೃತಗೊಳಿಸುತ್ತಿದೆ.

ವಿರಜಾನಂದರು ಮಾರನೇ ದಿನವೇ (೧೭ನೇ ಮೇ) ಬೆಳಗ್ಗೆ ೧೦ ಗಂಟೆಗೆ ಮತ್ತೆ ಗ್ರಾಂಡ್‌ಟ್ರಂಕ್ ರೈಲನ್ನು ಹಿಡಿಯಬೇಕಿತ್ತು. ಒಬ್ಬ ಅಂಧ ಗಾಯಕನು ೮೦ ಮೈಲಿ ದೂರದಿಂದ ದೀಕ್ಷೆಗಾಗಿ ಬಂದಿದ್ದ. ವಿರಜಾನಂದರು ಬೇಗ ಬೇಗ ತಮ್ಮ ಸ್ನಾನಾದಿಗಳನ್ನು ಮುಗಿಸಿ ಆ ಭಕ್ತನ ಕೋರಿಕೆಯನ್ನು ಈಡೇರಿಸಿದರು. ನಿವೃತ್ತ ಜಿಲ್ಲಾ ನ್ಯಾಯಾಧೀಶರೊಬ್ಬರು ತಮ್ಮ ಒಂದು ಆಧ್ಯಾತ್ಮಿಕ ಸಮಸ್ಯೆಯ ಪರಿಹಾರಕ್ಕಾಗಿ ವಿರಜಾನಂದರೊಂದಿಗೆ ಮಾತನಾಡಲು ಬಂದರು. ಆದರೆ ಸಮಯವೆಲ್ಲಿ? 'ನಡೆಯಿರಿ ನನ್ನೊಡನೆ ನಿಲ್ದಾಣಕ್ಕೆ. ಗಾಡಿಯಲ್ಲಿ ಕುಳಿತು ನಿಮ್ಮ ಸಮಸ್ಯೆಯನ್ನು ಕೇಳುವೆ' ಎಂದರು ವಿರಜಾನಂದರು. ಆತನೂ ಹಾಗೆಯೇ ಮಾಡಿದ. ಆತನೊಬ್ಬ ವೇದಾಂತವಾದಿ, ಧ್ಯಾನ-ಧಾರಣೆಯ ಸಂಬಂಧವಾಗಿ ಹಲವಾರು ಸಂದೇಹಗಳು ಬಹಳ ದಿನಗಳಿಂದ ಆತನನ್ನು ಕಾಡುತ್ತಿದ್ದವು. ವಿರಜಾನಂದರೊಂದಿಗೆ ಚರ್ಚಿಸಿ ಅವನ್ನು ನಿವಾರಿಸಿಕೊಂಡರು. ಮತ್ತೆ ಮತ್ತೆ ವಿರಜಾನಂದರಿಗೆ ನಮಸ್ಕರಿಸಿ ತಮ್ಮ ಕೃತಜ್ಞತೆಗಳನ್ನು ಕೋರಿದರು.

ಗ್ರಾಂಡ್‌ಟ್ರಂಕ್ ಎಕ್ಸ್‌ಪ್ರೆಸ್‌ನಲ್ಲಿ ಝಾನ್ಸಿಗೆ ಪ್ರಯಾಣಿಸಿ ಅಲ್ಲಿ ರಾತ್ರಿ ೧೧ಕ್ಕೆ ಲಕ್ನೋವಿನ ರೈಲನ್ನು ಹಿಡಿಯಬೇಕಿತ್ತು. ಝಾನ್ಸಿಯಲ್ಲಿ ಇಳಿದು ನೋಡಿದರೆ, ೨೦ ನಿಮಿಷಕ್ಕೆ ಮೊದಲೇ ಲಕ್ನೋ ರೈಲು ಹೊರಟುಹೋಗಿತ್ತು. ನಿರೀಕ್ಷಣಾ ಕೊಠಡಿಯು ಇದ್ದರೂ ಅಲ್ಲಿ ತುಂಬ ಸೆಖೆ. ಬೇರೆ ಉಪಾಯ ಕಾಣದೆ ನಿಲ್ದಾಣದ ಜಗುಲಿಯಲ್ಲಿ (ಪ್ಲಾಟ್‌ಫಾರ್ಮ್) ರಾತ್ರಿಯನ್ನು ಕಳೆಯಬೇಕಾಯಿತು. ಒಂದು ರೂಪಾಯಿ ಕೊಟ್ಟು ನಿಲ್ದಾಣದ ಉಪಾಹಾರ ಗೃಹದಿಂದ ಇಬ್ಬರ ಊಟವನ್ನು ತರಿಸಿಕೊಂಡು ಮೂವರೂ ತೃಪ್ತಿಯಿಂದ ತಿಂದರು. ಮಾರನೇ ದಿನ ಮಧ್ಯಾಹ್ನ ಒಂದೂವರೆಗೆ ಅವರು ಹಿಡಿಯಬೇಕಾದ ಮುಂದಿನ ರೈಲು. ಮಧ್ಯಭಾರತದ ಬೇಸಿಗೆ — ರಣರಣ ಬಿಸಿಲು. ಅರ್ಧಬೆಂದು ಲಕ್ನೋ ತಲುಪಿದಾಗ ರಾತ್ರಿ ಏಳೂಮುಕ್ಕಾಲು. ಅಲ್ಲಿಯ ಶ್ರೀರಾಮಕೃಷ್ಣ ಸೇವಾಶ್ರಮದ ಕಾರ್ಯದರ್ಶಿಗಳಾದ ಸ್ವಾಮಿ ದೇವೇಶಾನದರು (ಪ್ರಭಾಸ್) ನಿಲ್ದಾಣಕ್ಕೆ ಬಂದಿದ್ದರು. ಪೂಜನೀಯ ಮಹಾರಾಜರನ್ನೂ, ಜೊತೆಗೆ ಬಂದವರನ್ನೂ ಸಾದರದಿಂದ ಆಶ್ರಮಕ್ಕೆ ಕರೆದೊಯ್ದರು. ಲಕ್ನೋ ನಗರದ ಅಮಿನಾಬಾದ್ ಎಂಬಲ್ಲಿ ಸೇವಾಶ್ರಮವಿರುವುದು. ಇದು 'ಸ್ವಾಮೀಜಿ ಕಾ ದವಾಖಾನಾ' (ಸ್ವಾಮೀಜಿಯ ಚಿಕಿತ್ಸಾಲಯ) ಎಂದೇ ಪ್ರಸಿದ್ಧ. 'ಸ್ವಾಮೀಜಿ' ಅರ್ಥಾತ್ ವಿಶಾಲದೇಹದ, ಗೌರವರ್ಣದ, ಮಧುರಭಾಷಿಯಾದ ದೇವೇಶಾನಂದರು. ಸ್ಥಳೀಯ ಹಿಂದೂ ಮುಸಲ್ಮಾನರ ತಂದೆ-ತಾಯಿ ಇವರೇ. ನಾಲ್ಕೈದು ಗಂಟೆಗಳ ಕಾಲ ಸತತ ಕುಳಿತು ಔಷಧಗಳನ್ನು ಸ್ವತಃ ಕೊಡುತ್ತಿದ್ದರು. ಇವರ ಕೈಗುಣ ಅದ್ಭುತವಾದದ್ದು. ಸಾವಿರಾರು ಬಡರೋಗಿಗಳ ಚಿಕಿತ್ಸೆಯ ವ್ಯವಸ್ಥೆಯ ಜೊತೆಗೆ ಸೇವಾಶ್ರಮವು ಉಚಿತ ಶಾಲೆಯನ್ನೂ ಮತ್ತು ಒಂದು ದೊಡ್ಡ ಗ್ರಂಥಾಲಯವನ್ನೂ ನಡೆಸುತ್ತಿತ್ತು.

ಲಕ್ನೋ ಸೇವಾಶ್ರಮವು ಶ್ಯಾಮಲಾತಾಲ್ ಮತ್ತು ಮಾಯಾವತಿಯ ನಡುವಿನ ಠಾಣ್ಯದಂತಿತ್ತು. ವಿರಜಾನಂದರು ಹಿಂದೆಯೂ ಕೆಲವೊಮ್ಮೆ ಇಲ್ಲಿದ್ದು ಆತಿಥ್ಯವನ್ನು ಸ್ವೀಕರಿಸಿದ್ದರು. ದೇವೇಶಾನಂದರ ಪ್ರೀತ್ಯಾದರಗಳು ವಿರಜಾನಂದರನ್ನು ಆಕರ್ಷಿಸಿತ್ತು. ಆದ್ದರಿಂದ ತಾವು ದೇವೇಶಾನಂದರಿಗಿಂತ ಎಲ್ಲ ರೀತಿಯಲ್ಲೂ ಹಿರಿಯರಾದರೂ ಕೂಡ, ತಮ್ಮ ಸಮಾನರೆಂಬಂತೆ ಅವರೊಡನೆ ವರ್ತಿಸುತ್ತಿದ್ದರು; ತಂಬಾಕನ್ನು ಹಂಚಿಕೊಳ್ಳುತ್ತಿದ್ದರು. ಈಗಲೂ ಸಹ ವಿರಜಾನಂದರು ಅಂತೆಯೇ ಮಾಡಲು ಸಿದ್ಧರು! ತಮ್ಮ ತಂಬಾಕಿನ ನಳಿಕೆಯನ್ನು ದೇವೇಶಾನಂದರ ಮುಂದೆ ಹಿಡಿದರು, ಸೇವಿಸಲೆಂದು. ಪಾಪ ಅವರಿಗಾದರೋ ನಾಚಿಕೆ. ಅಲ್ಲಿಂದ ಪಲಾಯನಗೈದರು. ನಂತರ ವಿರಜಾನಂದರ ಸೇವಕರಿಗೆ, ''ಈಗಲೂ ಹಾಗೆ ನಡೆಯಲು ಸಾಧ್ಯವೆ? ಈಗ ಅವರು ನಮ್ಮ ಸಂಘಗುರು!'' ಎಂದು ಉದ್ಗರಿಸಿದರು.

ಮಠಾಧ್ಯಕ್ಷರ ಶುಭಾಗಮನದ ಉಪಯೋಗವನ್ನು ಲಕ್ನೋ ಭಕ್ತರು ಚೆನ್ನಾಗಿಯೇ ಪಡೆದುಕೊಂಡರು. ಅಲ್ಲಿಯ ದರ್ಶನಾರ್ಥಿಗಳ ಮತ್ತು ದೀಕ್ಷಾರ್ಥಿಗಳ ಅಭಿಲಾಷೆಯನ್ನು ವಿರಜಾನಂದರು ಪೂರ್ಣಗೊಳಿಸಿದರು. ಲಕ್ನೋವಿನಿಂದ ಹೊರಟ ಮಹಾರಾಜರು ರಾತ್ರಿ ಫಿಲಿಭಿತ್ ಜಂಕ್ಷನ್‌ನಲ್ಲಿ ರೈಲನ್ನು ಬದಲಾಯಿಸಿ, ಮಿಕ್ಕ ೩೮ ಮೈಲಿ ಕ್ರಮಿಸಿ ಮಾರನೇ ದಿನ ಮಧ್ಯಾಹ್ನ ೧೨ಕ್ಕೆ ಟನಕಪುರವನ್ನು ತಲುಪಿದರು. ಅಲ್ಲಿ ತಮ್ಮ ಊಟವನ್ನು ಬೇಗ ಮುಗಿಸಿ, ದಂಡಿಯಲ್ಲಿ ಶ್ಯಾಮಲಾತಾಲನ್ನು ತಲುಪಿದಾಗ ರಾತ್ರಿ ೮ ಗಂಟೆಯಾಗಿತ್ತು (೨೦ ಮೇ ೧೯೩೮).

ಶ್ಯಾಮಲಾತಾಲ್ ಆಶ್ರಮದ ಕಟ್ಟಡಕ್ಕೆ ಮತ್ತೆ ನಾಲ್ಕು ಕೊಠಡಿಗಳನ್ನು ಹೊಸದಾಗಿ ಸೇರಿಸಲಾಗಿತ್ತು. ಅಡಿಗೆ ಮನೆ, ಉಗ್ರಾಣ, ಊಟದ ಮನೆ ಮತ್ತು ಕೋಠಿ (ಗೋದಾಮು). ೧೯೩೯ರ ಮೇ ೨೮ರಂದು ಇವುಗಳನ್ನು ವಿಧಿವತ್ತಾಗಿ ಉದ್ಘಾಟಿಸಲಾಯಿತು. ವಿರಜಾನಂದರು ಹೊಸ ಅಡುಗೆಮನೆಯ ನವನಿರ್ಮಿತ ಒಲೆಯನ್ನು ತಾವೇ ಸ್ವತಃ ಹಚ್ಚಿದರು. ಹೊಸ ಊಟದ ಮನೆಯಲ್ಲಿ ೧೦ ಅಡಿ ಉದ್ದ, ಎರಡೂವರೆ ಅಡಿ ಅಗಲ ಮತ್ತು ಒಂದೂಕಾಲು ಅಡಿ ಎತ್ತರದ ಮೇಜಿನ ಮುಂದೆ ಮಣೆಗಳಲ್ಲಿ ಕುಳಿತು ಆಶ್ರಮವಾಸಿಗಳೆಲ್ಲ ತಮ್ಮ ಮಧ್ಯಾಹ್ನದ ಭೋಜನವನ್ನು ಮಾಡಿದರು. ಅಡಿಗೆ ಮಾಡಲು ಪಾಚಕರಿದ್ದರು. ಆದರೆ ಬಡಿಸುವ ಬಾಬತ್ತಿರಲಿಲ್ಲ. ಅಡಿಗೆಯ ವ್ಯಂಜನಗಳನ್ನೆಲ್ಲ ಮೇಜಿನ ಮೇಲಿಟ್ಟು ಎಲ್ಲರೂ ಒಟ್ಟಿಗೆ 'ಬ್ರಹ್ಮಾರ್ಪಣಂ...' [೧] ಮಂತ್ರವನ್ನು ಉಚ್ಚರಿಸಿ ತಮಗೆ ಬೇಕಾದ್ದನ್ನು ತಾವೇ ಬಡಿಸಿಕೊಳ್ಳುತ್ತಿದ್ದರು.

ಸ್ವಾಮಿ ವಿರಜಾನಂದರು ಈ ಬಾರಿ ಶ್ಯಾಮಲಾತಾಲ್‌ನ ಮುಖ್ಯ ಕಟ್ಟಡ ಬಿಟ್ಟು ಒಂದು ಫರ್ಲಾಂಗ್ ದೂರವಿದ್ದ ಮತ್ತೊಂದು ಕಟ್ಟಡದಲ್ಲಿ ಇಳಿದುಕೊಳ್ಳಲು ತೀರ್ಮಾನಿಸಿದರು. ಅವರ ಸೇವಕರೂ ಅಲ್ಲಿಯೇ ಇರುವುದೆಂದು ನಿರ್ಧಾರವಾಯಿತು (ಈ ಕಟ್ಟಡವನ್ನು ೧೯೨೮ರಲ್ಲಿ ಕೊಂಡುಕೊಳ್ಳಲಾಗಿತ್ತು). ಈ ಕಟ್ಟಡದಲ್ಲಿ ಎಲ್ಲವನ್ನೂ ವ್ಯವಸ್ಥೆಗೊಳಿಸಲು ಕೆಲವು ದಿನಗಳು ಹಿಡಿದವು. ಈ ನೆಲಅಂತಸ್ತಿನ ಕಟ್ಟಡದಲ್ಲಿ ಮಧ್ಯದ ಕೊಠಡಿಯು ದೊಡ್ಡದಾಗಿದ್ದು, ಅದರ ಇಕ್ಕೆಲಗಳಲ್ಲಿ ಒಂದೊಂದು ಸಣ್ಣ ಕೊಠಡಿಗಳಿದ್ದವು. ಮಧ್ಯದ ಕೊಠಡಿಯ ಸ್ವಲ್ಪಭಾಗವನ್ನು ಮರೆಮಾಡಿ ವಿರಜಾನಂದರು ತಮ್ಮ ದೇವರ ಮನೆಯನ್ನು ಮಾಡಿಕೊಂಡರು. ಠಾಕೂರ್, ಶ್ರೀಮಾತೆ, ಮತ್ತು ಸ್ವಾಮೀಜಿಯವರ ಛಾಯಾಚಿತ್ರವನ್ನು ಒಂದು ಟೀಪಾಯಿಯ ಮೇಲೆ ಇಟ್ಟಿದ್ದರು. ಅಲ್ಲದೆ ಶ್ರೀಮಾತೆಯವರ ಪಾದಚಿಹ್ನೆಯಿದ್ದ ಬಟ್ಟೆಯನ್ನೂ ಇಟ್ಟಿದ್ದರು. ಇದನ್ನು ಶ್ರೀಮಾತೆಯವರ ಜೀವಿತ ಕಾಲದಲ್ಲಿ ಯೋಗಾನಂದರ ಇಚ್ಛೆಯ ಮೇರೆಗೆ ಒಮ್ಮೆ ಗೋಲಾಪ್ ಮಾ ಶ್ರೀಮಾತೆಯವರ ಪದತಲಕ್ಕೆ ಅಲ್ತವನ್ನು (ಕೆಂಪು ದ್ರವ) ಹಚ್ಚಿ, ಕೆಲವು ಬಟ್ಟೆಯ ತುಂಡುಗಳ ಮೇಲೆ ಪಾದಗಳ ಅಚ್ಚನ್ನು ತೆಗೆದಿದ್ದರು. ಅದರಲ್ಲೇ ಒಂದನ್ನು ವಿರಜಾನಂದರು ಪಡೆದಿದ್ದರು. (ಈಗಲೂ ಅದು ಶ್ಯಾಮಲಾತಾಲ್‌ನ ಇದೇ ವೇದಿಕೆಯಲ್ಲಿ ಸುರಕ್ಷಿತವಾಗಿದೆ). ಅಷ್ಟೇ ಅಲ್ಲದೆ, ದೇವರ ಮನೆಯಲ್ಲಿ ಒಂದು ಸಂಪುಟದಲ್ಲಿ ಕಾಮಾರಪುಕುರ, ಜಯರಾಂಬಾಟಿ ಮತ್ತು ಪಂಚವಟಿಯ ಮಣ್ಣು ಮತ್ತು ಶ್ರೀಮಾತೆಯವರ ಪಾದಪೂಜೆಯ ಪುಷ್ಪ, ಬಿಲ್ವಪತ್ರೆಯನ್ನೂ ಸಹ ಇಟ್ಟಿದ್ದರು. ಈ ದೇವರ ಮನೆಯಲ್ಲಿ ವಿರಜಾನಂದರು ಬೆಳಗು-ಬೈಗುಗಳಲ್ಲಿ ಅಲ್ಲದೆ ಸ್ನಾನಾನಂತರವೂ ಸ್ವಲ್ಪ ಹೊತ್ತು ಕುಳಿತುಕೊಳ್ಳುತ್ತಿದ್ದರು. ಆಗ ನಾನಾ ವಿಧದ ಪುಷ್ಪಗಳಿಂದ ದೇವರ ಪಟಗಳನ್ನು ಅಲಂಕರಿಸುತ್ತಿದ್ದರು. ಶ್ಯಾಮಲಾತಾಲ್‌ನಲ್ಲಿ ಹೂವಿಗೇನು ಅಭಾವವಿಲ್ಲ! ಮೊದಲೇ ವಿರಜಾನಂದರಿಗೆ ಹೂವಿನ ಬಗ್ಗೆ ಆಕರ್ಷಣೆ.

ಸ್ವಾಮಿ ಅನಂತಾನಂದರು (ಕಾನ್ಹಾಯ್ ಮಹಾರಾಜ್) ಈಗ ವಿರಜಾನಂದರೊಂದಿಗೆ ಶ್ಯಾಮಲಾತಾಲ್‌ಗೆ ಬಂದಿದ್ದಾರೆ. ಅವರು ಇಲ್ಲಿಗೆ ಬಂದಿರುವುದು ಇದೇ ಮೊದಲೇನಲ್ಲ. ಈ ಜಾಗವು ಅವರಿಗೆ ಪ್ರಿಯವಾದದ್ದೇ. ವಿರಜಾನಂದರ ಬಗ್ಗೆ ಅವರಿಗೆ ಆಳವಾದ ಶ್ರದ್ಧೆಯಿದೆ, ಪ್ರೀತಿಯಿದೆ, ತನ್ನ ಸ್ವಂತದವರೆಂಬ ಭಾವನೆಯಿದೆ. ಈ ಭಾವನೆಯು ಹೊರಗಿನ ಯಾವುದೇ ಅಡ್ಡಿಯನ್ನು ಲೆಕ್ಕಿಸುವುದಿಲ್ಲ. ಇವರು ಪ್ರೇಮಾನಂದರ ಮತ್ತು ತುರೀಯಾನಂದರ ಸಂಗ ಮತ್ತು ಸೇವೆಯನ್ನು ಬಹಳವಾಗಿ ಮಾಡಿದ್ದರು. ೧೯೧೦ರಲ್ಲಿ ಇವರು ಮನೆಯನ್ನು ತ್ಯಜಿಸಿ ಬಂದು ಕಾಶೀ ಸೇವಾಶ್ರಮವನ್ನು ಸೇರಿದ್ದರು. ಈಗಿವರಿಗೆ ೫೦ ವರ್ಷವಾಗಲಿದೆ. ಹಿರಿಯ ಸಾಧುಗಳ ರೀತಿನೀತಿಯನ್ನು ಇವರು ಚೆನ್ನಾಗಿಯೇ ತಿಳಿದಿದ್ದರು. ಹಾಗೆ ತಿಳಿದಿದ್ದರಿಂದಲೇ ಹಿರಿಯರೊಂದಿಗೆ ತರ್ಕಿಸಲು ಅಥವಾ ಜಗಳವಾಡಲು ಹಿಂಜರಿಯುತ್ತಿರಲಿಲ್ಲ! ಶ್ಯಾಮಲಾತಾಲ್‌ಗೆ ಬಂದ ಕೆಲವು ದಿನಗಳಲ್ಲೇ ಇವರು ವಿರಜಾನಂದರೊಂದಿಗೆ ಮಾತಿಗೆ ಮಾತನ್ನು ಬೆಳಸಲಾರಂಭಿಸಿದರು. ಒಂದು ದಿನ ವಿರಜಾನಂದರು ತಮಗೆ ಜನರು ಕಾಣಿಕೆಯಾಗಿ ನೀಡಿದ ವಸ್ತ್ರ ಮತ್ತು ಇತರ ಸಾಮಗ್ರಿಗಳನ್ನು ಕಪಾಟಿನಲ್ಲಿ ಜೋಡಿಸುತ್ತಿದ್ದಾಗ ನಡೆದ ಸಂಭಾಷಣೆ ಹೀಗಿದೆ :

**ಕಾನ್ಹಾಯ್:** ಮಹಾರಾಜ್, ಇವುಗಳನ್ನೆಲ್ಲ ಕೂಡಿಟ್ಟು ಏನಾಗಬೇಕಾಗಿದೆ? ಎಲ್ಲವನ್ನು ಹಂಚಿಬಿಡಿ.

**ವಿರಜಾನಂದರು :** ಅಗತ್ಯಬಿದ್ದಾಗ ಹಂಚಲಾಗುವುದು.

**ಕಾನ್ಹಾಯ್:** ನೀವು ಕಪಾಟಿನೊಳಗೊಮ್ಮೆ ತೂರಿಸಿದರೆ ಮತ್ತೆ ಅದನ್ನು ಹೊರತರಲಾರಿರಿ.

**ವಿರಜಾನಂದರು:** ಅದ್ಯಾಕೆ? ಪ್ರಯೋಜನವಿದ್ದಾಗ ಹೊರತೆಗೆಯಲಾರೆನೇನು?

**ಕಾನ್ಹಾಯ್:** ಇಲ್ಲ! ನಿಮಗಾಗುವುದಿಲ್ಲ. ಅದಕ್ಕೆ ನೀವು ಕೆಲವು ವಸ್ತುಗಳನ್ನು ಆಶ್ರಮದ ಮುಖ್ಯ ಕಟ್ಟಡದಲ್ಲಿಡುವುದು ಒಳ್ಳೆಯದು.

**ವಿರಜಾನಂದರು:** ಇಲ್ಲ, ಎಲ್ಲ ವಸ್ತುಗಳು ಒಂದೇ ಜಾಗದಲ್ಲಿರುವುದು ಒಳ್ಳೆಯದು.

**ಕಾನ್ಹಾಯ್:** ನೋಡ್ತಾ ಇದೀನಿ, ನೀವು ಇಲ್ಲಿಯೇ ಒಂದು ಸಂಸಾರ ಹೂಡಲು ಹೊರಟಿರುವಿರಿ.

---

[೧] ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ ।
ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮ ಕರ್ಮಸಮಾಧಿನಾ ॥

''ಯಜ್ಞಾಗ್ನಿಯು ಬ್ರಹ್ಮಸ್ವರೂಪ. ಆ ಅಗ್ನಿಯಲ್ಲಿ ಆಹುತಿಯಾಗುವ ತುಪ್ಪವೂ ಸಹ ಬ್ರಹ್ಮಸ್ವರೂಪ. ಯಾವ ಪಾತ್ರೆಯಿಂದ ಅರ್ಪಿಸಲ್ಪಡುತ್ತದೆಯೋ ಅದು ಬ್ರಹ್ಮ (ಸ್ರುವಾದಿ) ಹೋಮ ಮಾಡುವವರೂ ಬ್ರಹ್ಮ. ಹೋಮದ ಸಮಗ್ರ ಕರ್ಮವೂ ಬ್ರಹ್ಮಸ್ವರೂಪ. ಬ್ರಹ್ಮಭಾವನೆಯಿಂದ ತುಂಬಿದ ಈ ರೀತಿಯ ಕರ್ಮದಿಂದ ಬ್ರಹ್ಮವನ್ನೇ ಹೊಂದುತ್ತಾರೆ.''

ವಿರಜಾನಂದರು ಸ್ವಲ್ಪ ಗಂಭೀರವಾಗಿ ನುಡಿದರು, ''ಹೌದು, ಈ ಪ್ರಪಂಚದಲ್ಲಿ ಇರಲೇಬೇಕಾದಾಗ ಇದೆಲ್ಲ ಮಾಡಲೇ ಬೇಕಾಗುತ್ತದೆ.'' ಕಾನ್ಹಾಯಿಯವರಿಗನ್ನಿಸಿತು ಇಷ್ಟೊಂದು ತರ್ಕ ಮಾಡಿದ್ದು ಸರಿಯಲ್ಲವೆಂದು. ಅದೂ ಅಲ್ಲದೆ ವಿರಜಾನಂದರೀಗ ಮಠದ ಅಧ್ಯಕ್ಷರು. ತಪ್ಪಿಗಾಗಿ ಅವರಲ್ಲಿ ಕ್ಷಮೆ ಯಾಚಿಸಿದರು.

ಈ ಘಟನೆಯ ನಂತರವೂ ಸಹ ಮತ್ತೊಂದು ದಿನ ಬೇರಾವುದೋ ವಿಷಯಕ್ಕೆ ಇಬ್ಬರ ಮಧ್ಯೆ ತರ್ಕ ನಡೆದಿತ್ತು. ಎದುರೆದುರು ಅಲ್ಲ , ಬರವಣಿಗೆಯ ಮೂಲಕ. ವಿರಜಾನಂದರು ತಾವಿದ್ದ ಬಂಗಲೆಯಿಂದ ತಮ್ಮ ಸೇವಕನ ಮೂಲಕ ಈ ಅನಂತಾನಂದರಿಗೆ ಚೀಟಿಯೊಂದನ್ನು ಕಳುಹಿಸಿದರು 'ಇಂತಿಂಥ ಕೆಲಸವನ್ನು ಇಂತಿಂತೇ ಮಾಡಬೇಕು' ಎಂದು. ಕಾನ್ಹಾಯ್ ಮತ್ತೊಂದು ಚೂರು ಕಾಗದದಲ್ಲಿ ಜವಾಬು ನೀಡಿದರು, 'ಮಹಾರಾಜ್, ಅದು ಆ ತರಹ ಆಗಲು ಸಾಧ್ಯವಿಲ್ಲವಲ್ಲ'. ವಿರಜಾನಂದರು ಕೊಂಚ ಅಸಂತುಷ್ಟರಾದರು, ಆದರೂ ಸಹನೆ ಕಳೆದುಕೊಂಡು ಕಟುಮಾತುಗಳನ್ನಾಡಲಿಲ್ಲ; ಏಕೆಂದರೆ ಅವರಿಗೆ ಅನಂತಾನಂದರ ಆಂತರ್ಯ ತಿಳಿದಿತ್ತು. ಇತ್ತ ಕಾನ್ಹಾಯ್ ಮಹಾರಾಜರಿಗೆ ರಾತ್ರಿಯಿಡೀ ನಿದ್ದೆ ಇಲ್ಲ. ಚಡಪಡಿಸಿ ಸಂತಾಪಿಸುತ್ತಿದ್ದಾರೆ. ಮಾರನೇ ಬೆಳಗ್ಗೆ ಮತ್ತೊಂದು ಪತ್ರ ಬರೆದು ಕಳುಹಿಸಿದರು: 'ನನ್ನನ್ನು ಕ್ಷಮಿಸಿ ಮಹಾರಾಜ್, ನೀವು ಕ್ಷಮಿಸದಿದ್ದರೆ ನಾನು ನಿಮಗೆ ಈ ಜನ್ಮದಲ್ಲಿ ಮುಖ ತೋರಿಸಲಾರೆ, ಹೊರಟುಬಿಡುವೆ.'

ಆದರೆ ಅನಂತಾನಂದರಿಗೆ 'ಹೊರಟುಹೋಗುವ' ಸಂದರ್ಭವೇನೂ ಬರಲಿಲ್ಲ. ವಿರಜಾನಂದರು ನಗುಮುಖದಿಂದ 'ನಡೆದದ್ದನ್ನು ಮರೆತುಬಿಡಲು' ಹೇಳಿದರು. ತಾವೂ ಸಹ ಅದನ್ನು ನೆನಪಿನಿಂದ ಅಳಿಸಿದರು. ಕಾನ್ಹಾಯ್ ಮಹಾರಾಜರಿಗೀಗ ಪೂಜ್ಯ ಹರಿ ಮಹಾರಾಜರ ನೆನಪಾಯಿತು. ತುರೀಯಾನಂದರು ಆಗ ಕಾಶಿಯಲ್ಲಿ ಅಸ್ವಸ್ಥರಾಗಿದ್ದರು. ಕಾನ್ಹಾಯ್ ಅವರ ಸೇವೆ ಮಾಡುತ್ತಿದ್ದನು. ಯಾವುದೋ ಒಂದು ಕಾರಣಕ್ಕೆ ತುರೀಯಾನಂದರು ಕಾನ್ಹಾಯನನ್ನು ತುಂಬ ಬೈದಿದ್ದರು. ಇದರಿಂದ ಅವನು ಮುನಿಸಿಕೊಂಡು ಮೂರು ದಿನ ಕಣ್ಮರೆಯಾಗಿದ್ದನು. ತುರೀಯಾನಂದರ ಚಿಂತೆಗೆ ಕೊನೆಯೇ ಇಲ್ಲದಾಯಿತು. ಕಾನ್ಹಾಯ್ ಹಿಂತಿರುಗಿ ಬಂದಾಗ 'ಕಾನೂ, ಕಾನೂ' ಎಂದು ಕರೆದು ಈ ಜೀವನ್ಮುಕ್ತ ಮಹಾಪುರುಷರು ಪಿತೃಸ್ನೇಹ ತೋರಿ ಆದರಿಸಿದ್ದರು.

ವಿರಜಾನಂದರು ಶ್ಯಾಮಲಾತಾಲ್‌ಗೆ ಬಂದಾಗಿನಿಂದ, ತಾವು ಇಡೀ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಅಧ್ಯಕ್ಷರಾಗಿ ಸರ್ವೋನ್ನತ ಸ್ಥಾನದಲ್ಲಿ ಇರುವರೆಂಬುದನ್ನೂ, ತಮ್ಮ ನೇತೃತ್ವದಲ್ಲೇ ಭಾರತದ ನಾನಾ ಪ್ರಾಂತ್ಯದಲ್ಲಿರುವ ನೂರಾರು ಆಶ್ರಮಗಳಲ್ಲಿ ಸಾಧುಗಳು ಸಂಘದ ಅನೇಕ ವಿಭಾಗಗಳಲ್ಲಿ ನಾನಾ ಕಾರ್ಯಕಲಾಪಗಳಲ್ಲಿ ನಿರತರಾಗಿ ಅದನ್ನು ಸುಸಂಪನ್ನಗೊಳಿಸುತ್ತಿದ್ದಾರೆ ಎಂಬುದನ್ನೂ ಮರೆತೇ ಬಿಟ್ಟಿದ್ದರು. ನೂರಾರು ಕೆಲಸಗಳಲ್ಲಿ ಖರ್ಚುವೆಚ್ಚಗಳ ಲೆಕ್ಕವಿಡುವುದು ಒಂದು ಕೆಲಸ ಮಾತ್ರ. ವಿರಜಾನಂದರು ಶ್ಯಾಮಲಾತಾಲ್‌ಗೆ ಬಂದಾಗಿನಿಂದ ಈ ಆಶ್ರಮದ ಜವಾಬ್ದಾರಿಯನ್ನೇ ತುಂಬ ಹಿರಿದೆಂದು ನೋಡುತ್ತಿದ್ದಾರೆ, ತಾವೇ ಸ್ವತಃ ಲೆಕ್ಕ-ಪತ್ರದ ಪುಸ್ತಕ ಹಿಡಿದು ಕುಳಿತಿದ್ದಾರೆ! ವರಾಹ ನಗರದ ಮಠದಲ್ಲಿ ಶಶಿಮಹಾರಾಜರು ಕಾಳೀಕೃಷ್ಣನನ್ನು ಲೆಕ್ಕದಲ್ಲಿ ಪರಿಣತನನ್ನಾಗಿ ಮಾಡಿದ್ದರೆ ಈಗ ಈ ಗೊಂದಲವಿರುತ್ತಿತ್ತೆ? ಬಾಲ್ಯದಿಂದಲೂ ಲೆಕ್ಕವೆಂದರೆ ಅದೇನೋ ಭೀತಿ. ಈಗ ವಾರ್ಧಕ್ಯದಲ್ಲೂ ಅದು ಬಿಟ್ಟಿಲ್ಲ , ಇನ್ನೂ ಬಾಧಿಸುತ್ತಲಿದೆ! ಊಹ್ಞೂ! ಲೆಕ್ಕ ಪತ್ರ ಹೊಂದುತ್ತಲೇ ಇಲ್ಲ. ಆಶ್ರಮದ ಸಾಧಾರಣ ಖರ್ಚಿನ ಜೊತೆಗೆ ಕಟ್ಟಡ ನಿರ್ಮಾಣದ ಖರ್ಚೂ ಸೇರಿ ಭಾರೀ ಗೋಜಲನ್ನು ಸೃಷ್ಟಿಸಿದೆ.

ಇಷ್ಟರಲ್ಲೇ ಮತ್ತೊಂದು ಉತ್ಸವ ಬಂದೇಬಿಟ್ಟಿತು, ಸ್ನಾನಯಾತ್ರೆ (೨ನೇ ಜೂನ್). ಅಂದರೆ ವಿರಜಾನಂದರ ೬೫ನೇ ಜನ್ಮದಿನ. ಆಶ್ರಮವಾಸಿಗಳ ಅಭಿನಂದನೋತ್ಸವ. ದೇವರ ಪಟಗಳನ್ನು ಚೆನ್ನಾಗಿ ಅಲಂಕರಿಸಿ ವಿರಜಾನಂದರು ಬಹಳ ಹೊತ್ತು ಉಪಾಸನೆಯಲ್ಲಿ ಕುಳಿತರು. ಭೋಜನದ 'ಮೆನು'ವನ್ನು ತಾವೇ ಸ್ವತಃ ಗೊತ್ತುಪಡಿಸಿದ್ದರು. ಎಲ್ಲರೊಡನೆ ಕುಳಿತು ಹಿಂದಿನ ದಿನಗಳ ನೆನಪಿನ ಸುರುಳಿ ಬಿಚ್ಚಿ, ಎಲ್ಲರೊಂದಿಗೆ ಹಂಚಿಕೊಳ್ಳುತ್ತ ಊಟಮಾಡತೊಡಗಿದರು. ಸಾಮಾನ್ಯವಾಗಿ ತಿನ್ನುವುದು ನಿಧಾನವೇ, ಇಂದು ಇನ್ನೂ ನಿಧಾನ. ಲೆಕ್ಕ-ಪತ್ರಕ್ಕೆ ಅಂದು ರಜೆ; ಮತ್ತೆ ಕೆಲವು ದಿನಗಳೂ ಸಹ ಅದಕ್ಕೆ ರಜೆ ಕೊಡಬೇಕಾಯಿತು. ಏಕೆಂದರೆ ಆಶ್ರಮಕ್ಕೆ ಮೂವರು ಅತಿಥಿಗಳು ಬಂದಿದ್ದಾರೆ. ಒಬ್ಬ ಸಂನ್ಯಾಸಿ, ಒಬ್ಬ ಇಂಜಿನಿಯರ್, ಒಬ್ಬ ಡಾಕ್ಟರ್. ಇವರೆಲ್ಲ ಕೈಲಾಸ ಯಾತ್ರಿಗಳು. ಶ್ಯಾಮಲಾತಾಲ್‌ನಿಂದ ಮಾಯಾವತಿಗೆ ಹೋಗಿ, ಅಲ್ಲಿಂದ ಆಸ್ಕೋಟ್‌ಗೆ ತಲುಪಿ ಕೈಲಾಸದ ಮಾರ್ಗವನ್ನು ಹಿಡಿಯಲಿದ್ದಾರೆ. ಇವರೊಂದಿಗೆ ಸಹಯಾತ್ರಿಕರಾಗಿ ಶ್ಯಾಮಲಾತಾಲ್ ಆಶ್ರಮದ ಮ್ಯಾನೇಜರ್, ಶಂಕರ್ ಮಹಾರಾಜ್ (ಸ್ವಾಮಿ ಅಪೂರ್ವಾನಂದರು) ಸಹ ಹೊರಡಲಿದ್ದಾರೆ. ಅತಿಥಿಗಳು ತಮ್ಮ ಆನಂದ-ಕೋಲಾಹಲಗಳಿಂದ ಆಶ್ರಮವನ್ನು ತುಂಬಿದ್ದರು.

*(ಮುಂದುವರಿಯುವುದು)*

''ತನ್ನ ಬಗ್ಗೆ ಚಿಂತಿಸುವುದರ ಬದಲಾಗಿ, ಇತರರ ಬಗ್ಗೆ ಚಿಂತಿಸಬೇಕು. ಇದರಿಂದ ಮನಸ್ಸಿನ ಉದ್ವೇಗ ಕ್ರಮೇಣ ಇಲ್ಲದಾಗುವುದು. ಮನಸ್ಸಿನ ಶುದ್ಧೀಕರಣವೆಂದರೆ, ತನ್ನಲ್ಲೇ ಕೇಂದ್ರಿತವಾದ ಅಹಂಕಾರ ಹಾಗೂ ಸ್ವಾರ್ಥಬುದ್ಧಿಯನ್ನು ನಾಶ ಮಾಡುವುದು. ಮನಸ್ಸು ವಿಶಾಲವಾದಷ್ಟೂ ಅಹಂಕಾರ ಕಡಿಮೆಯಾಗುವುದು. ಮನಸ್ಸಿನ ಉದ್ವಿಗ್ನತೆ ಕಡಿಮೆಯಾದಷ್ಟೂ ಅದು ಪರಿಶುದ್ಧವಾಗುವುದು ; ಶುದ್ಧ ಮನಸ್ಸಿನಲ್ಲಿ ಪರಬ್ರಹ್ಮನು ಪ್ರಕಟಗೊಳ್ಳುವನು.''

— ಸ್ವಾಮಿ ಅಭೇದಾನಂದ